**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**<u>ಸಿ.ಸಿ ನಂಃ  44/ 2017</u>**

| | | |
|---|---|---|
| **ಸಾಕ್ಷಿಯ ಹೆಸರುಃ** | **ಹಣಮಂತ್ರಾಯ** | **ಪ್ರಾಸಾಃ 02** |
| **ತಂದೆ/ಗಂಡನ ಹೆಸರುಃ** | **ನರಸಯ್ಯ ಕಲಾಲ** | **ಚಾಸಾಃ 03** |
| **ವಯಸ್ಸುಃ** | **71 ವರ್ಷ** | **ದಿಃ 15-12-2021** |
| **ಉದ್ಯೋಗಃ** | **ಒಕ್ಕಲುತನ** | **ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.** |
| **ವಾಸ ಸ್ಥಳಃ** | **ಕೊಟಗೇರಾ** | |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ</u>**

**ನನಗೆ** ಚಾಸಾಃ1 ಮತ್ತು 2 ರವರ ಪರಿಚಯ ಇಲ್ಲ. ದಿಃ 26-08-2016 ರಂದು ನಾನು ಗುನ್ಹೆ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಪೋಲಿಸರು ನನ್ನ ಸಮಕ್ಷಮ ಯಾವುದೇ ಗುನ್ಹೆ ಸ್ಥಳದ ಪಂಚನಾಮೆ ಮಾಡಿರುವುದಿಲ್ಲ. ನನಗೆ ಈ ಪ್ರಕರಣದ ಘಟನೆಯ ಬಗ್ಗೆ ಆಗಲಿ ಅಥವಾ ಘಟನಾ ಸ್ಥಳದ ಬಗ್ಗೆ ಆಗಲಿ ನನಗೆ ಮಾಹಿತಿ ಇರುವುದಿಲ್ಲ.

**( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ</u>**

ದಿಃ 26-08-2016 ರಂದು ಸಂಜೆ ಃ4-00 ರಿಂದ 5-00 ಗಂಟೆಯವರಗೆ ಆರೋಪಿತರ ಮನೆಯ ಮುಂದೆ ಚಾಸಾಃ1 ರವರು ತೋರಿಸಿ ಕೊಟ್ಟ ಮೇರೆಗೆ ನನ್ನ ಮತ್ತು ಚಾಸಾಃ2 ರವರ ಸಮಕ್ಷಮದಲ್ಲಿ ಪೋಲಿಸರು ಈ ಪ್ರಕರಣದ ಗುನ್ಹೆ ಸ್ಥಳದ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಗುನ್ಹೆ ಸ್ಥಳ ಪಂಚನಾಮೆ ಮತ್ತು ಅದಕ್ಕೆ ಲಗತ್ತಾದ ಸ್ಥಳದ ನಕಾಶೆಯನ್ನು ತೋರಿಸಿ ಅದರಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತುಗಳನ್ನು ನೋಡಿ ಗುರುತಿಸಿರುತ್ತಾರೆ. ಗುನ್ಹೆ ಸ್ಥಳದ ಪಂಚನಾಮೆಯನ್ನು ಮತ್ತು ಸ್ಥಳ ನಕಾಶೆಯನ್ನು ಈಗಾಗಲೇ ನಿಪಿ-1 ಮತ್ತು ನಿಪಿ-2 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನಿಪಿ-1(ಬಿ) ಮತ್ತು 2(ಬಿ)ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನಿಪಿ-1 ಮತ್ತು 2 ರಲ್ಲಿ ತಾನು ಪೋಲಿಸರ ಹೇಳಿಕೆಯ ಮೇರೆಗೆ ಠಾಣೆಯಲ್ಲಿ

ಹೆಬ್ಬೆಟ್ಟಿನ್ನು ಹಾಕಿರುತ್ತೇನೆ ಹಾಗೂ ನಿಪಿ-1 ಮತ್ತು 2 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀ ಸವಾಲು ಆರೋಪಿತರ ಪರಃ ಶ್ರೀ ಎಂ ಬಿ ಪಿ ವಕೀಲರವರಿಂದಃ**

ಯಾವುದೇ ಪಾಟೀ ಸವಾಲು ಇಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**